ಕೇಂದ್ರ, ರಾಜ್ಯ ಸರ್ಕಾರಗಳ ರೈತ, ಕಾರ್ಮಿಕ ವಿರೋದಿ ನೀತಿಗಳ ವಿರುದ್ಧ

# ಸಂಯುಕ್ತ ಹೋರಾಟ–ಕರ್ನಾಟಕ

(ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳ ಸಮನ್ವಯ ಸಮಿತಿ)

ನಂ. 9/15, 6 ನೇ ಮುಖ್ಯ ರಸ್ತೆ, ಶ್ರೀಕಂಠೇಶ್ವರ ನಗರ, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು–560086.

ದಿನಾಂಕ: 14.07.2026

## ಮಾಧ್ಯಮ ಹೇಳಿಕೆ

- **ಬಿಡದಿ ಟೌನ್‌ಶಿಪ್ ಯೋಜನೆ ವಿವಾದದಲ್ಲಿ ಇರುವಾಗ ರೈತರ ಜೊತೆ ಮಾತಾನಾಡಿ ಯೋಜನೆಯ ಭವಿಷ್ಯದ ಬಗ್ಗೆ ನಿರ್ಧರಿಸದೇ ಸರ್ವಾಧಿಕಾರಿ ರೀತಿಯಲ್ಲಿ ಪೊಲೀಸ್ ಬಲದಲ್ಲಿ ಸರ್ವೆ ಮಾಡುವುದನ್ನು ನಾವು ಖಂಡಿಸುತ್ತೇವೆ.**
- **ಗಟ್ಟಿ ಪ್ರತಿರೋಧ ಒಡ್ಡೋಣ, ಆದರೆ ಸಂಯಮದ ಜೊತೆ ನಡೆದುಕೊಳ್ಳೋಣ ಎಂದು ರೈತ ಬಂಧುಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ.**
- **ರೈತರಿಗೆ ಕೊಟ್ಟ ಭರವಸೆಯಂತೆ ಸಿಎಂ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸಮಸ್ಯೆಗೆ ಕೊನೆ ಹಾಡಬೇಕು.**
- **ಅತ್ಯಂತ ಫಲವತ್ತಾದ ನೀರಾವರಿ ಸಮೃದ್ಧ, ಬಹುವಾರ್ಷಿಕ ಬೆಳೆಗಳ ಭೂಮಿ ಮೇಲೆ ಕಾಂಕ್ರೀಟ್ ಟೌನ್ ಶಿಪ್ ಮಾಡುವ ವಿನಾಶಕಾರಿ ಯೋಜನೆಯನ್ನು ಕೈಬಿಡಲೇಬೇಕು.**

ಮಾನ್ಯರೇ,

ನಿನ್ನೆ ಬಿಡದಿಯ ಮಂದಲ ಹಳ್ಳಿಯಲ್ಲಿ ಪೋಲೀಸ್ ಬಲದೊಂದಿಗೆ JMC ಮಾಡಲು ಅಧಿಕಾರಿಗಳು ಮುಂದಾದ್ದರಿಂದ ರೈತರು ಅದನ್ನು ಪ್ರತಿಭಟಿಸಿದ್ದಾರೆ. ರೈತರು ಕಳೆದ ಒಂದುವರೆ ವರ್ಷದಿಂದ ನಿರಂತರವಾಗಿ ಈ ಯೋಜನೆಗೆ ನಮ್ಮ ಸಮ್ಮತಿ ಇಲ್ಲ ಎಂದು ಪ್ರತಿಭಟಿಸುತ್ತಿರುವುದು ಎಲ್ಲರಿಗೂ ಗೊತ್ತಿದೆ. ಇತ್ತೀಚಿಗೆ ಶಾಸಕರು ಸಭೆ ಕರೆದು ಏನು ಬೆಲೆ ಬೇಕು ಹೇಳಿ ಎಂದು ಕೇಳಿದಾಗಲೂ, ಬೆಲೆ ವಿಚಾರ ಮಾತನಾಡಲು ನಮಗೇನೂ ಇಲ್ಲ, ನಾವು ಭೂಮಿ ಮಾರಲು ಸಿದ್ದರಿಲ್ಲ. "ಭೂ ಸ್ವಾಧೀನ ಕೈಬಿಡಬೇಕು" ಎಂಬ ಏಕೈಕ ಬೇಡಿಕೆ ಹೊರತಾಗಿ ಬೇರೆ ಯಾವ ಮಾತುಕತೆಗೂ ನಾವು ಸಿದ್ದರಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಅಧಿಕಾರಿಗಳು "ಹಾಗಾದರೆ ಈ ವಿಚಾರ ಮುಖ್ಯಮಂತ್ರಿಗಳೇ ತೀರ್ಮಾನಿಸಬೇಕು. ಅವರ ಜೊತೆ ಸಭೆ ನಿಗದಿ ಮಾಡುತ್ತೇವೆ" ಎಂದು ಮಾತು ಕೊಟ್ಟಿದ್ದರು. ಈಗ ಇದ್ದಕ್ಕಿದ್ದಂತೆ ಪೋಲೀಸ್ ಬಲಗಳೊಂದಿಗೆ ಜಂಟಿ ಸರ್ವೆ ಮಾಡಲು ಮುಂದಾಗಿರುವುದು ಒಪ್ಪತಕ್ಕದ್ದಲ್ಲ. ಇದನ್ನು ಸಂಯುಕ್ತ ಹೋರಾಟದ ಕರ್ನಾಟಕದ ಎಲ್ಲಾ ಸಹಭಾಗಿ ಸಂಘಟನೆಗಳು ತೀವ್ರವಾಗಿ ಖಂಡಿಸುತ್ತೇವೆ.

ಯಾವುದೇ ಕಾರಣಕ್ಕೂ ಬಲವಂತದ ಸ್ವಾಧೀನಕ್ಕೆ ಸರ್ಕಾರ ಮುಂದಾಗಬಾರದು, ಕೂಡಲೇ ಮುಖ್ಯಮಂತ್ರಿಗಳು ರೈತರೊಂದಿಗೆ ಸಭೆ ಕರೆದು ಸಮಸ್ಯೆಯನ್ನು ಇತ್ಯಾರ್ಥಗೊಳಿಸಬೇಕು ಎಂದು ಒತ್ತಾಯಿಸುತ್ತೇವೆ. ಸರ್ಕಾರ ಒಂದು ವೇಳೆ ಬಲಂವಂತದ ಭೂಸ್ವಾಧೀನಕ್ಕೆ ಮುಂದಾದರೆ ಇದು ಕೇವಲ ಬಿಡದಿ ರೈತರ ಹೋರಾಟವಾಗಿ ಉಳಿಯುವುದಿಲ್ಲ. ಇಡೀ ರಾಜ್ಯದ ರೈತಕುಲ ತಿರುಗಿಬೀಳುತ್ತದೆ. ಇದರ ರಾಜಕೀಯ ಪರಿಣಾಮಗಳು ತೀವ್ರತರನದಾಗಿರುತ್ತವೆ. ಸರ್ಕಾರ ಈ ದುಸ್ಸಾಹಸಕ್ಕೆ ಕೈ ಹಾಕಬಾರದು ಎಂದು ಎಚ್ಚರಿಸುತ್ತಿದ್ದೇವೆ.

ನಿನ್ನೆ ಅಧಿಕಾರಿಗಳು ಹೆಚ್ಚಿನ ಪೋಲೀಸ್ ಬಲಗಳನ್ನು ತಂದಾಗ ಇನ್ನೇನು ನಮ್ಮ ಭೂಮಿಯನ್ನು ವಶಪಡಿಸಿಕೊಂಡುಬಿಡುತ್ತಾರೆ ಎಂಬ ಆತಂಕದಲ್ಲಿ ರೈತ ಮಹಿಳೆಯರು ಪೊರಕೆಗಳ ಜೊತೆ ಪ್ರತಿಭಟಿಸಿದ್ದಾರೆ. ಕೆಲವರು ಅಧಿಕಾರಿಗಳ ಜೊತೆಯೂ ತಳ್ಳಾಟ ನಡೆದಿದೆ. ಇದಕ್ಕಾಗಿ ವಿಷಾದಿಸುತ್ತೇವೆ. ಆದರೆ ಈ ಸಂದರ್ಭ ಏರ್ಪಡಲು ಸರ್ಕಾರದ ನಡೆಯೇ ಮುಖ್ಯ ಕಾರಣವಾಗಿದೆ. ಏನೇ ಇದ್ದರೂ ರೈತರಾಗಿ ನಾವು ಸಂಯಮ ಕಾಪಾಡಿಕೊಳ್ಳೋಣ. ದಿಟ್ಟವಾಗಿ ಆದರೆ ಶಾಂತಿಯುತವಾಗಿ ನಮ್ಮ ಹೋರಾಟ ಮುಂದುವರಿಸೋಣ. ನಮ್ಮ ಭೂಮಿಯನ್ನು ಯಾವುದೇ ಕಾರಣಕ್ಕೂ ಬಿಡದೆ ಉಳಿಸಿಕೊಳ್ಳೋಣ ಎಂದು ರೈತ ಬಂಧುಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ವಂದನೆಗಳು.

**ಎಲ್ಲಾ ರೈತ ಹಾಗೂ ರೈತಪರ ಸಂಘಟನೆಗಳ ಪರವಾಗಿ**

**ಹೆಚ್. ಆರ್. ಬಸವರಾಜಪ್ಪ** [ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನ

**ಬಡಗಲಪುರನಾಗೇಂದ್ರ** [ಅಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ]

**ಚುಕ್ಕಿ ನಂಜುಂಡ ಸ್ವಾಮಿ** [ಅಧ್ಯಕ್ಷೀಯ ಮಂಡಳಿ ಸದಸ್ಯರು, ಕರ್ನಾಟಕ ರಾಜ್ಯ ರೈತ ಸಂಘ - ಸಾಮೂಹಿಕ ನಾಯಕತ್ವ]

**ಟಿ.ಯಶ್ವಂತ್,** [ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಪ್ರಾಂತ ರೈತ ಸಂಘ]